ಸಾಕ್ಷಿಯನ್ನು ದಿನಾಂಕಃ **30-06-2026** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ ಶ್ರೀ. ಎಸ್ ಜಿ ಹೆಚ್.,     ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯ ಕುರಿತು ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದ ವಿಷಯ ನಾನೇ ಹೇಳಿ ಬರೆಸಿದ್ದು, ಅವು ಸತ್ಯವಾಗಿರುತ್ತದೆ.

ದಿನಾಂಕಃ 17-01-2026 ರ ಅಲಭ್ಯ ಪ್ರಮಾಣ ಪತ್ರ **ನಿಪಿ.1** ಎಂದು, 1 ನೇ ಅರ್ಜಿದಾರನ ಆಧಾರ ಕಾರ್ಡ, 2 ನೇ ಅರ್ಜಿದಾರರ ಆಧಾರ ಕಾರ್ಡ ನೋಟರೈಸ್ಡ ಪ್ರತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಮೂಲ ದಾಖಲೆಗಳೊಂದಿಗೆ ಪರಿಶೀಲಿಸಿ ನೋಡಿ ಕ್ರಮವಾಗಿ **ನಿಪಿ.2** ಮತ್ತು **ನಿಪಿ.3** ಎಂದು, ದಿನಾಂಕ 16-06-2026 ರ ಜನಮಾಧ್ಯಮ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು **ನಿಪಿ.4** ಮತ್ತು ಪ್ರಕಟಣೆ ಭಾಗವನ್ನು **ನಿಪಿ.4(ಎ)** ಎಂದು, ವಂಶವೃಕ್ಷದ ಪ್ರಮಾಣ ಪತ್ರವನ್ನು **ನಿಪಿ.5** ಎಂದು ಗುರುತಿಸಲಾಯಿತು. ಆದ್ದರಿಂದ ಅರ್ಜಿಯನ್ನು ಪುರಸ್ಕರಿಸಬೇಕಾಗಿ ವಿನಂತಿ.

**ಎದುರುದಾರರು ಏಕಪಕ್ಷೀಯವಾಗಿ ಉಳಿದಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

**-Sd/-**

**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾದಂ..**

**ಹೊನ್ನಾವರ.**